**ಕರ್ನಾಟಕ ವಿಧಾನ ಪರಿಷತ್ತು**

**ನೂರ ಐವತ್ತೈದನೆಯ ಅಧಿವೇಶನ**

# ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–14)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 10ರ ತಿದ್ದುಪಡಿ.-** ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 14)ರ 10ನೇ ಪ್ರಕರಣದಲ್ಲಿ "ಭಾರತ ದಂಡ ಸಂಹಿತೆಯ 193, 219 ಮತ್ತು 229ನೇ ಪ್ರಕರಣದ" ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ "ಭಾರತೀಯ ನ್ಯಾಯ ಸಂಹಿತೆ, 2023(2023ರ ಕೇಂದ್ರ ಅಧಿನಿಯಮ 45)ರ 229, 257 ಮತ್ತು 268ನೇ ಪ್ರಕರಣದ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸಿದಾಗ ಲಗತ್ತಿಸಿದಂತೆ)

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 14)ದಲ್ಲಿರುವ ಭಾರತೀಯ ದಂಡ ಸಂಹಿತೆ, 1860ರ ಉಲ್ಲೇಖಿತ ಉಪಬಂಧಗಳಿಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆ, 2023(2023ರ ಕೇಂದ್ರ ಅಧಿನಿಯಮ 45)ರ ಉಪಬಂಧಗಳನ್ನು ಪ್ರತಿಯೋಜಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

### ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961
### (1961ರ ಕರ್ನಾಟಕ ಅಧಿನಿಯಮ 14)ರ ಉದ್ದೃತ ಭಾಗ

**X X XX XX**

**10. ವಿಚಾರಣೆಗಳು ಮತ್ತು ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕುದು:**

ಈ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮಿಷನರ ಮುಂದೆ ನಡೆಯುವ ಎಲ್ಲಾ ವಿಚಾರಣೆಗಳು ಮತ್ತು ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ 193, 219 ಮತ್ತು 229ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳಾಗಿರುವುದಾಗಿ ಭಾವಿಸತಕ್ಕುದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 18ನೇ ಮಾರ್ಚ್ 2025

**KARNATAKA LEGISLATIVE COUNCIL**
**ONE HUNDRED AND FIFTY FIFTH SESSION**

# THE KARNATAKA VILLAGE OFFICES ABOLITION (AMENDMENT) BILL, 2025

**(LA Bill No. 14 of 2025)**
**(As passed by the Karnataka Legislative Assembly)**

A Bill further to amend the Karnataka Village Offices Abolition Act, 1961.

Whereas it is expedient further to amend the Karnataka Village Offices Abolition Act, 1961 (Karnataka Act 14 of 1961) for the purposes hereinafter appearing;

Be it enacted by the Karnataka State Legislature in the Seventy sixth year of the Republic of India as follows:-

**1. Short title and commencement.–** (1) This Act may be called the Karnataka Village Offices Abolition (Amendment) Act, 2025.

(2) It shall come into force at once.

**2. Amendment of section 10.-** In the the Karnataka Village Offices Abolition Act, 1961 (Karnataka Act 14 of 1961), in section 10, for the words and figures "sections 193, 219 and 229 of the Indian Penal Code" the words, and figures "sections 229, 257 and 268 of the Bharatiya Nyaya Sanhita 2023 (Central Act 45 of 2023)" shall be substituted.

## STATEMENT OF OBJECTS AND REASONS

**(As appended to at the time of Introduction)**

It is considered necessary further to amend the Karnataka Village Offices Abolition Act, 1961 (Karnataka Act 14 of 1961) to substitute the reference of the provisions of the Indian Penal Code, 1860 to respective provision in the Bharatiya Nyaya Sanhita, 2023 (Central Act 45 of 2023).

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

**ANNEXURE**

**EXTRACT FROM THE KARNATAKA VILLAGE OFFICES ABOLITION ACT, 1961 (KARNATAKA ACT 14 OF 1961)**

**XXX XXX XXX**

**10. Inquiries and proceedings to be judicial proceedings.—**All inquiries and proceedings before the Deputy Commissioner under this Act shall be deemed to be judicial proceedings within the meaning of sections 193, 219 and 229 of the Indian Penal Code.

**XXX XXX XXX**

Govt. Press, Vikasa Soudha, Bengalur, 18th Mar, 2025, P7, W.D. , Copies 300